ಸಿ.ಸಿ ನಂಬ್ರಃ 683/2024
ಪಿ.ಡಬ್ಲ್ಯೂ : 1

ದಿನಾಂಕಃ 04-08-2025 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಗಿದೆ

ಪಾಟೀ ಸವಾಲು: ಆರೋಪಿ ಪರ ಶ್ರೀ ಕೆ.ಸಿ. ಎಸ್ ವಕೀಲರಿಂದ

1. ಪಿರ್ಯಾದಿಯ ಸೊಸೈಟಿಯ ಮುಖ್ಯ ಕಚೇರಿ ಮಂಗಳೂರಿನಲ್ಲಿ ಇರುತ್ತದೆ. ಮುಖ್ಯ ಕಚೇರಿಯ ಕಾರ್ಯ ನಿರ್ವಾಹಣಾಧಿಕಾರಿಯವರ ಹೆಸರು ಯಜ್ಞೇಶ್ವರ. ನಾನು ಕುಂದಾಪುರದ ಬ್ರಾಂಚ್ ನ ಶಾಖಾಧಿಕಾರಿಯಾಗಿರುತ್ತೇನೆ. ನನ್ನ ನೇಮಕಾತಿ ಮಾಡಿರುವುದು ಚೀಪ್ ಎಕ್ಸೀಕ್ಯೂಟಿವ್ ಆಫೀಸರ್. ನಾನು ಕೆಲಸ ನಿರ್ವಹಿಸುವುದು ಅವರ ಅಧೀನದಲ್ಲಿ ಎಂದರೆ ಸರಿ. ಪ್ರಕರಣವನ್ನು ನಡೆಸಲು ಅಧಿಕಾರ ಕೊಡುವವರು ಚೀಪ್ ಎಕ್ಸೀಕ್ಯೂಟಿವ್ ಆಫೀಸರ್ ಎಂದರೆ ಸರಿ. ಈ ಪ್ರಕರಣದಲ್ಲಿ ಚೀಪ್ ಎಕ್ಸೀಕ್ಯೂಟಿವ್ ಆಫೀಸರ್ ರವರು ಯಾವುದೇ ಅಧಿಕಾರ ಪತ್ರ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ನಡಾವಳಿ ಇರುತ್ತದೆ ಎಂದು ನುಡಿಯುತ್ತಾರೆ. ನಿ.ಪಿ.7 ಈ ಪ್ರಕರಣಕ್ಕಾಗಿ ಸೃಷ್ಟಿಸಿದ ದಾಖಲೆ ಎಂದರೆ ಸರಿಯಲ್ಲ.

2. ಆರೋಪಿಗೆ ಯಾವಾಗ ಸಾಲವನ್ನು ಕೊಟ್ಟಿರುತ್ತೇವೆ ಎಂದು ನೆನಪಿರುವುದಿಲ್ಲ. ಸಾಲ ಮರುಪಾವತಿಯ ಕಂಡಿಶನ್‌ಗಳ ಬಗ್ಗೆ ನನಗೆ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ 5 ವರ್ಷಗಳ ತನಕ ಅವರು ಸಾಲವನ್ನು ಮರುಪಾವತಿಸಬಹುದಾದ ಷರತ್ತಿಗೆ ಒಳಪಟ್ಟಿರುತ್ತದೆ ಎಂದು ನುಡಿಯುತ್ತಾರೆ. ಆರೋಪಿಗೆ 3 ಲಕ್ಷ ಸಾಲ ಕೊಡಲಾಗಿರುತ್ತದೆ. ಆರೋಪಿತ 6 ಸಾವಿರ ಅಥವಾ 7 ಸಾವಿರವೋ ಹಣವನ್ನು ಮರುಪಾವತಿಸಿರುತ್ತಾರೆ. ಅವರಿನ ಲೋನ್ ನ ಎಕ್ಸ್ಟ್ರಾಕ್ಟ್ ನ್ನು ಹಾಜರು ಪಡಿಸಬಹುದು.

3. ನನ್ನ ಪ್ರಕಾರ ಆರೋಪಿಗ ಹಣ ಮರುಪಾವತಿ ಮಾಡುವ ಸಾಮರ್ಥ್ಯ ಇರುವುದಿಲ್ಲ ಎಂದರೆ ಸರಿ. ಸಾಕ್ಷಿ ಪುನಃ ಅವರು ತುಂಬಾ ಕಷ್ಟದಲ್ಲಿ ಇದ್ದರು ಎಂದು ನುಡಿಯುತ್ತಾರೆ. 4 ಬಾರಿ ಅವರ ಮನೆಗೆ ಹಣ ವಸೂಲಾತಿಗಾಗಿ ಹೋಗಿರುತ್ತೇವೆ. ಅವರಿಗೆ ಹಣ ಕಟ್ಟುವ ಸಾಮರ್ಥ್ಯ ಇಲ್ಲದ ಕಾರಣ ಚೆಕ್ ನ್ನು ಬ್ಯಾಂಕಿಗೆ ಹಾಜರು ಪಡಿಸಿರುತ್ತೇವೆ ಎಂದರೆ ಸರಿ. ಚೆಕ್ ನ ಸಹಿ ಮಾಡಿದ ಶಾಯಿಗೂ ಇತರ ವಿಷಯಗಳನ್ನು ತುಂಬಿದ ಶಾಯಿಗೂ ವ್ಯತ್ಯಾಸ ಇರುತ್ತದೆ ಎಂದರೆ ಸರಿ. ಅವರಿಂದ ಪಡೆದ ಖಾಲಿ ಸಹಿ ಮಾಡಿದ ಚೆಕ್ ನ್ನು ಇತರ ಮಾಹಿತಿಗಳನ್ನು ನಾವೇ ತುಂಬಿಸಿ ಬ್ಯಾಂಕಿಗೆ ಹಾಜರು ಪಡಿಸಿರುತ್ತೇವೆ ಎಂದರೆ ಸರಿ.

4. ಚೆಕ್ ನ್ನು ಬ್ಯಾಂಕಿಗೆ ಹಾಕುವ ಸಮಯದಲ್ಲಿ ಆತನ ಖಾತೆಯಲ್ಲಿ ಹಣ ಇರಲಿಲ್ಲ ಎಂದು ನಮಗೆ ಗೊತ್ತಿತ್ತು ಎಂದರೆ ಸರಿ. ಆರೋಪಿಯಿಂದ ಪಡೆದ ಖಾಲಿ ಚೆಕ್ ನ್ನು ದುರುಪಯೋಗ ಪಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ನಾನು ಯಾವುದೇ ಪರಿಹಾರಕ್ಕೆ ಬದ್ಧನಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ - ಇಲ್ಲ.

ಓ.ಹೇ.ಕೇ.ಸ.ಇದೆ

ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕುಂದಾಪುರ